**1** ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು

ಸ್ಪೆಷಲ್ ಮೊಕದ್ದಮೆ ನಂಃ 24/2022

| | | |
|---|---|---|
| ಸಾಕ್ಷಿದಾರರ ಹೆಸರು | - ಗುರುವ | ಪಿಡಬ್ಲೂ - 03 |
| ತಂದೆ ಹೆಸರು | - ಬಿಜಲಾ | ಸಿಡಬ್ಲೂ - 08 |
| ವಯಸ್ಸು | - 60 ವರ್ಷ | |
| ಉದ್ಯೋಗ | - ಕೂಲಿ ಕೆಲಸ | |
| ವಾಸ ಸ್ಥಳ | - ದುರ್ಗದಹಳ್ಳಿ | |

*(ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, ಆತನನ್ನು ಈ ದಿನ google meet app ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಎಂದು ಖಾತ್ರಿಪಡಿಸಿಕೊಳ್ಳಲಾಯಿತು.)*

ದಿನಾಂಕಃ 17-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-

**1.** ಫ್ರಾಸಾ-2 ನನ್ನ ಅಣ್ಣ. ಚಾಸಾ-7 ನನ್ನ ಅತ್ತಿಗೆ. ಮೃತ ಶೇಷಪ್ಪ ಫ್ರಾಸಾ-2 ಮತ್ತು ಚಾಸಾ-7 ರವರ ಮಗ. ಚಾಸಾ-14 ಮತ್ತು 15 ಗೊತ್ತು. ಈ ದಿನ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಹಾಜರುಪಡಿಸಿದ ಆರೋಪಿ ಗೊತ್ತು.

2. ಶೇಷಪ್ಪ ಚಾಸಾ-15 ವಾಸುದೇವರವರ ಕಾಫಿ ತೋಟದಲ್ಲಿ ಕೂಲಿ ಕೆಲಸ ಮಾಡಿಕೊಂಡಿದ್ದನು. ಫ್ರಾಸಾ-2 ರವರಿಗೆ 3 ಜನ ಮಕ್ಕಳು, ಅವರ ಪೈಕಿ ಶೇಷಪ್ಪ ಮೊದಲನೆಯವನು, ಅವರ ಎರಡನೇ ಮಗ ಸುರೇಶ. ಶೇಷಪ್ಪ ಕೊಲೆಯಾಗುವ ಪೂರ್ವದಲ್ಲಿಯೇ ಸದರಿ

ಸುರೇಶನ ಕೊಲೆಯಾಗಿತ್ತು, ಮೂರನೆಯವಳು ಗೀತಾ, ಆಕೆ ಮಂಗಳೂರಿನಲ್ಲಿ ತನ್ನ ಗಂಡನೊಂದಿಗೆ ವಾಸವಾಗಿದ್ದಾಳೆ.

3. ಈಗ್ಗೆ 4 ವರ್ಷಗಳ ಹಿಂದೆ ಒಂದು ದಿನ ರಾತ್ರಿ 10.00 ಗಂಟೆ ಸುಮಾರಿಗೆ ಪ್ರಾಸಾ-2 ರವರು ನನಗೆ ಫೋನ್ ಮಾಡಿ, ಶೇಷಪ್ಪನ ಕೊಲೆಯಾಗಿರುವುದಾಗಿ ತಿಳಿಸಿದರು. ಆಗ ಬಸ್ಸಿನ ಸೌಕರ್ಯವಿಲ್ಲದ ಕಾರಣ ನನಗೆ ಕೂಡಲೇ ಹೊರಡಲು ಆಗಲಿಲ್ಲ. ಮಾರನೇ ದಿನ ಬೆಳಿಗ್ಗೆ 10.30 ರಿಂದ 11.00 ಗಂಟೆ ಒಳಗೆ ಚಿಕ್ಕಮಗಳೂರಿನ ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ಹೋದೆನು. ಸದರಿ ಶವಾಗಾರದಲ್ಲಿ ಶೇಷಪ್ಪನ ಶವವನ್ನು ಇರಿಸಲಾಗಿತ್ತು, ನಾನು ನೋಡಿದಾಗ ಆತನ ಮುಖದ ಬಲಭಾಗದಲ್ಲಿ, ಕುತ್ತಿಗೆಯ ಬಳಿ, ಹೊಟ್ಟೆಯ ಬಳಿ ಮತ್ತು ತಲೆಯ ಹಿಂಭಾಗದಲ್ಲಿ ಯಾವುದೋ ಕತ್ತಿಯಿಂದ ಕಡಿದಾಗ ಆಗುವಂತಹ ಗಾಯಗಳು ಕಂಡು ಬಂದವು.

4. ಶೇಷಪ್ಪನ ಕೊಲೆಯಾಗುವ 4 ದಿನಗಳ ಹಿಂದೆ ಚಾಸಾ-15 ವಾಸುದೇವರವರ ಎಸ್ಟೇಟಿನಲ್ಲಿರುವ ಕೂಲಿ ಲೈನ್ ಗೆ ಹೋಗಿದ್ದೆನು, ಸದರಿ ಕೂಲಿ ಲೈನ್ ನಲ್ಲಿದ್ದ ಒಂದೇ ಮನೆಯಲ್ಲಿ ಆರೋಪಿ ಮತ್ತು ಶೇಷಪ್ಪ ಒಟ್ಟಿಗೆ ವಾಸವಾಗಿರುವುದನ್ನು ನೋಡಿದ್ದೆನು. ಶವಾಗಾರದಲ್ಲಿ ನಾನು ಚಾಸಾ-15 ವಾಸುದೇವ್ ರವರನ್ನು ಕುರಿತು ಏನಾಯಿ ತಎಂದು ಕೇಳಿದಾಗ, ಬುಧವಾರದಂದು ರಜೆ ಇದ್ದ ಕಾರಣ ಆ ದಿನ ಆತ ಆರೋಪಿ ಮತ್ತು ಶೇಷಪ್ಪ ರವರಿಗೆ ತಲಾ ರೂ.5000/- ಕುಾಲಿ ಹಣವನ್ನು ಕೊಟ್ಟಿದ್ದಾಗಿ ಮಾರನೇ ದಿನ ಅಂದರೆ ಗುರುವಾರ ಆರೋಪಿ ಮತ್ತು ಶೇಷಪ್ಪರವರು ಕೆಲಸಕ್ಕೆ ಬರದಿದ್ದ ಕಾರಣ ಅವರು ಯಾಕೆ ಬಂದಿಲ್ಲವೆಂದು ಕೇಳಲು ತಾನು ಅವರಿಬ್ಬರೂ ವಾಸವಿದ್ದ ಮನೆಗೆ

ಹೋಗಿ ನೋಡಿದಾಗ ಅಲ್ಲಿ ಶೇಷಪ್ಪ ಹೆಣವಾಗಿ ಬಿದ್ದಿದ್ದಾಗಿ ಮತ್ತು ಆರೋಪಿ ಅಲ್ಲಿ ಇರಲಿಲ್ಲ ಎಂಬುದಾಗಿ ತಿಳಿಸಿದರು.

5. ಆಗ ನಾನು ಚಾಸಾ-15 ರವರನ್ನು ಕುರಿತು ಯಾವುದೇ ಗುರುತಿನ ಚೀಟಿಯನ್ನು ಪಡೆಯದೆ ಆರೋಪಿಯನ್ನು ಕೆಲಸಕ್ಕೆ ಸೇರಿಸಿಕೊಂಡಿದ್ದೀರಿ, ನಿಮ್ಮ ಎಸ್ಟೇಟಿನಲ್ಲಿ ಶೇಷಪ್ಪನ ಕೊಲೆಯಾಗಿರುವುದರಿಂದ ನಾವು ಯಾರನ್ನು ಕೇಳಬೇಕು, ನಿಮ್ಮನ್ನೇ ಆ ಬಗ್ಗೆ ಕೇಳಬೇಕಾಗುತ್ತದೆ ಎಂದು ಕೇಳಿದೆನು. ಆಗ ಅವರು ಆರೋಪಿಯ ಬಗ್ಗೆ ದಾಖಲೆಯನ್ನು ಪೊಲೀಸರಿಗೆ ಕೊಡುತ್ತೇನೆ ಎಂದು ಹೇಳಿದರು.

6. ಸಾಕ್ಷಿಗೆ ಈಗಾಗಲೇ ನಿ.ಪಿ. 9 ಮತ್ತು 10 ಎಂದು ಗುರುತಿಸಲ್ಪಟ್ಟಿರುವ ಫೋಟೋಗಳಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿ, ಅವುಗಳನ್ನು ಮೇಲೆ ಹೇಳಿದ ಶವಾಗಾರದಲ್ಲಿ ತೆಗೆದಿದ್ದಾಗಿ ಅದರಲ್ಲಿ ಶೇಷಪ್ಪನ ಶವ ಕಂಡು ಬರುವುದಾಗಿ ನುಡಿದಿರುತ್ತಾರೆ. ಶವಾಗಾರದಲ್ಲಿ ಪೊಲೀಸರು ನನ್ನನ್ನು ವಿಚಾರಿಸಿದ್ದಾರೆ, ಆಗ ನಾನು ಅವರಿಗೆ ನನಗೆ ತಿಳಿದಿದ್ದ ಮಾಹಿತಿಯನ್ನು ತಿಳಿಸಿ, ಹೇಳಿಕೆಯನ್ನು ನೀಡಿದ್ದೇನೆ.

<u>ಪಾಟೀ ಸವಾಲು: ಆರೋಪಿಯ ಪರವಾಗಿಃ ಶ್ರೀ ಐ ಎಸ್ ಟಿ ವಕೀಲರಿಂದಃ</u>

7. ನನ್ನ ಬಳಿ ಆಟೋ ಇದೆ. ಚಿಕ್ಕಮಗಳೂರಿನಿಂದ ಕಬ್ಬಿನಹಳ್ಳಿ ಎಸ್ಟೇಟಿಗೆ ಯಾವ ಮಾರ್ಗದಲ್ಲಿ ಹೋಗಬೇಕಾಗುತ್ತದೆ ಎಂದರೆ ಸಾಕ್ಷಿ ಹತ್ತು ಹಲವಾರು ರಸ್ತೆಗಳಲ್ಲಿ ಹೋಗಬಹುದು, ವಾಹನದ ಚಾಲಕರು ಯಾವ ರಸ್ತೆಯಲ್ಲಿ ಕರೆದುಕೊಂಡು ಹೋಗುತ್ತಾರೆ ಎಂದು ನನಗೆ ವಿದ್ಯಾಭ್ಯಾಸವಿಲ್ಲದ ಕಾರಣ ಸರಿಯಾಗಿ ಹೇಳಲು ಬರುವುದಿಲ್ಲ

ಎನ್ನುತ್ತಾರೆ. ನನ್ನ ಬಳಿ ಇರುವ ಆಟೋವನ್ನು ನನ್ನ ಮಗ ಓಡಿಸುತ್ತಾನೆ. ಶೇಷಪ್ಪ ಮೃತಪಡುವ 4 ದಿನಗಳ ಹಿಂದೆ ಕಬ್ಬಿನಹಳ್ಳಿ ಎಸ್ಟೇಟಿಗೆ ಹೋಗಿದ್ದಾಗಿ ಹೇಳಿದ್ದೀರಿ, ಆ ಸಮಯದಲ್ಲಿ ನೀವು ಯಾವ ಮಾರ್ಗದಲ್ಲಿ ಹೋಗಿದ್ದೀರಿ ಎಂದರೆ ಸಾಕ್ಷಿ ಆ ದಿನ ನನ್ನನ್ನು ಸದರಿ ಎಸ್ಟೇಟಿಗೆ ಶೇಷಪ್ಪನೇ ಬಸ್ಸಿನಲ್ಲಿ ಕರೆದುಕೊಂಡು ಹೋಗಿದ್ದನು, ಆದರೆ ಯಾವ ಬಸ್ ಎಂದು ನನಗೆ ಗೊತ್ತಿಲ್ಲ. ಅದು ಯಾವ ಬಸ್ ಮತ್ತು ಅದು ಚಿಕ್ಕಮಗಳೂರಿನಿಂದ ಎಷ್ಟು ಗಂಟೆಗೆ ಹೊರಟಿತ್ತು ಎಂದರೆ ಸಾಕ್ಷಿ ಅದು ಸರ್ಕಾರಿ ಬಸ್ ಆಗಿತ್ತು, ಅದರಲ್ಲಿ ನಾವು ಚಿಕ್ಕಮಗಳೂರಿನಿಂದ 10/11.00 ಗಂಟೆಗೆ ಹೊರಟಿದ್ದೆವು. ಚಿಕ್ಕಮಗಳೂರಿನಿಂದ ಕಬ್ಬಿನಹಳ್ಳಿ ಎಸ್ಟೇಟಿಗೆ ಎಷ್ಟು ದೂರವಾಗುತ್ತದೆ ಎಂದರೆ ಸಾಕ್ಷಿ ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ ಎನ್ನುತ್ತಾರೆ.

8. ಶೇಷಪ್ಪ ನನ್ನನ್ನು ಸದರಿ ಎಸ್ಟೇಟಿನ ಕೂಲಿ ಲೈನ್ ನಲ್ಲಿರುವ ತನ್ನ ಮನೆಗೆ ಕರೆದುಕೊಂಡು ಹೋದಾಗ ಆರೋಪಿ ಸದರಿ ಮನೆಯಲ್ಲಿ ಇದ್ದನು, ಕೆಲಸಕ್ಕೆ ಹೋಗಿರಲಿಲ್ಲ. ಸದರಿ ಕೂಲಿ ಲೈನ್ ನಲ್ಲಿ ಎಷ್ಟು ಮನೆಗಳು ಇದ್ದವು ಎಂದರೆ ಸಾಕ್ಷಿ ಅಲ್ಲಲ್ಲಿ 4 – 4 ಮನೆಗಳು ಇದ್ದವು ಒಟ್ಟು 10 ರಿಂದ 15 ಇರಬಹುದು ಎನ್ನುತ್ತಾರೆ. ಆ ದಿನ ಶೇಷಪ್ಪನ ಮನೆಯಲ್ಲಿ ನಾನು 10 ರಿಂದ 15 ನಿಮಿಷ ಇದ್ದೆನು. ನಂತರ ಯಾವುದೋ ಬಸ್ ಬಂದಿತು, ಅದರಲ್ಲಿ ಹತ್ತಿಕೊಂಡು ಚಿಕ್ಕಮಗಳೂರಿಗೆ ಬಂದೆನು, ಅದು ಯಾವ ಬಸ್ ಎಂದು ಗೊತ್ತಿಲ್ಲ.

9. ಶೇಷಪ್ಪ ಮೃತಪಡುವ 4 ದಿನಗಳ ಹಿಂದೆ ನೀವು ಆತ ಕೂಲಿ ಲೈನ್ ನಲ್ಲಿ ವಾಸವಿದ್ದ ಮನೆಗೆ ಹೋಗಿದ್ದಾಗಿ, ಆತ ಆರೋಪಿಯೊಂದಿಗೆ ಒಟ್ಟಿಗೆ ವಾಸವಿದ್ದುದನ್ನು ನೋಡಿದ್ದಾಗಿ ನೀವು

ಪೊಲೀಸರಿಗೆ ನೀಡಿದ್ದೀರಿ ಎಂದು ಹೇಳಲಾದ ಹೇಳಿಕೆಯಲ್ಲಿ ತಿಳಿಸಿಲ್ಲ ಎಂದರೆ ಸರಿ.

10. ಚಾಸಾ-15 ರವರು ಆರೋಪಿ ಮತ್ತು ಶೇಷಪ್ಪನಿಗೆ ತಲಾ ರೂ.5000/- ಕೂಲಿ ಹಣವನ್ನು ನೀಡಿದ್ದಾಗಿ ನೀವು ಪೊಲೀಸರಿಗೆ ನೀಡಿದ್ದೀರಿ ಎಂದು ಹೇಳಲಾದ ಹೇಳಿಕೆಯಲ್ಲಿ ತಿಳಿಸಿಲ್ಲ ಎಂದರೆ ಸರಿ. ನೀವು ಚಾಸಾ-15 ರವರನ್ನು ಕುರಿತು ಆರೋಪಿಯ ಗುರುತಿನ ದಾಖಲೆಯನ್ನು ಪಡೆದುಕೊಂಡ ಬಗ್ಗೆ ಕೇಳಿದ್ದಾಗಿ ಹೇಳಿದ್ದೀರಿ, ಸದರಿ ವಿಚಾರವನ್ನು ಸಹಾ ನೀವು ಪೊಲೀಸರಿಗೆ ನೀಡಿದ್ದೀರಿ ಎಂದು ಹೇಳಲಾದ ಹೇಳಿಕೆಯಲ್ಲಿ ತಿಳಿಸಿಲ್ಲ ಎಂದರೆ ಸರಿ. ಶೇಷಪ್ಪನ ಮೈಮೇಲೆ ಕಂಡು ಬಂದಂತಹ ಗಾಯಗಳು ಯಾವುದೋ ಕತ್ತಿಯಿಂದ ಹೊಡೆದಾಗ ಆಗುವಂತಹ ಗಾಯಗಳು ಎಂದು ನೀವು ಪೊಲೀಸರಿಗೆ ನೀಡಿದ್ದೀರಿ ಎಂದು ಹೇಳಲಾದ ಹೇಳಿಕೆಯಲ್ಲಿ ತಿಳಿಸಿಲ್ಲ ಎಂದರೆ ಸರಿ.

11. ನೀವು ಪೊಲೀಸರಿಗೆ ನೀಡಿದ್ದೀರಿ ಎಂದು ಹೇಳಲಾದ ಹೇಳಿಕೆಯಲ್ಲಿ ಶೇಷಪ್ಪನ ಸಾವಿನ ಬಗ್ಗೆ ಆರೋಪಿಯ ಮೇಲೆ ಗುಮಾನಿ ಇರುತ್ತದೆ ಎಂದು ತಿಳಿಸಿದ್ದೀರಿ ಎಂದರೆ ಸರಿ. ತನಿಖಾ ಸಮಯದಲ್ಲಿ ಪೊಲೀಸರು ಆರೋಪಿಯನ್ನು ನನಗೆ ತೋರಿಸಿ , ನನ್ನಿಂದ ಆತನನ್ನು ಗುರುತಿಸಿ ಯಾವುದೇ ಹೇಳಿಕೆಯನ್ನು ಪಡೆದುಕೊಂಡಿಲ್ಲ. ಶೇಷಪ್ಪನ ಸಾವಿನ ಬಗ್ಗೆ ನಿಮಗೆ ಇಲ್ಲಿಯವರೆಗೂ ನಿಖರವಾಗಿ ತಿಳಿದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಆರೋಪಿ ಶೇಷಪ್ಪನ ಜೊತೆಯಲ್ಲಿ ಇದ್ದನು, ಆತನೇ ಶೇಷಪ್ಪನ ಕೊಲೆ ಮಾಡಿದ್ದಾನೆ ಎನ್ನುತ್ತಾರೆ. ಚಾಸಾ-15 ಮತ್ತು ಪೊಲೀಸರು ಹೇಳಿದ್ದರಿಂದ ನೀವು ಆರೋಪಿಯೇ ಶೇಷಪ್ಪನ ಕೊಲೆ

ಮಾಡಿದ್ದಾಗಿ ಹೇಳಿದ್ದೀರಿ ಎಂದರೆ ಸರಿಯಲ್ಲ. ಪೊಲೀಸರು ಇದೇ ರೀತಿ ಸಾಕ್ಷ್ಯ ನುಡಿಯಬೇಕು ಎಂದು ಹೇಳಿ ಕರೆತಂದಿದ್ದಾರೆ ಎಂದರೆ ಸರಿಯಲ್ಲ. ಆ ಕಾರಣಕ್ಕೆ ಪೊಲೀಸರು ಹೇಳಿಕೊಟ್ಟಂತೆ ನೀವು ಸುಳ್ಳು ಸಾಕ್ಷ್ಯನುಡಿದಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ